ಅರ್ಥವಾಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿಯಿಂದ ಮಾಡನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅವರು ಈ ಮಾತನ್ನು ಏತಕ್ಕೆ ಹೇಳಿದರೋ ಗೊತ್ತಿಲ್ಲ. ಅವರು ಏತಕ್ಕೆ ಹಗರಣ ಮಾಡಿದರೋ ಗೊತ್ತಿಲ್ಲ

ಶ್ರೀ ಡಿ. ಜಿ, ಬಸವನಗೌಡ.—ಅವರು ಒಂದು ಉದಾಹರಣೆ ಕೊಟ್ಟರು ಅಷ್ಟೆ. ಹಗರಣ ಮಾಡಲಿಲ್ಲ.

ಅಧ್ಯಕ್ಷರು.—ಈ ವಿಷಯವನ್ನು ಇಲ್ಲಿಗೇ ಮುಗಿಸೋಣ. ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಪ್ರಭಾವಯುತ ವ್ಯಕ್ತಿ ಯಾರು ಇದ್ದಾರೆ ಅವರ ಹೆಸರನ್ನು ಏತಕ್ಕೆ ಮುಚ್ಚಿಟ್ಟಿದ್ದಾರೋ ಗೊತ್ತಿಲ್ಲ. ಇದರ ಬಗ್ಗೆ ಸರ್ಕಾರದ ನೀತಿ ಏನು ? ನಾವು ಎಷ್ಟೇ ಹೇಳಿದರೂಕೂಡ ಇದನ್ನು ಸಿ.ಬಿ.ಐ.ಗೆ ವಹಿಸುವುದಿಲ್ಲ ಎಂದು ಹೇಳಿರುವುದರಿಂದ ನಾವು ಇದನ್ನು ಪ್ರತಿಭಟಿಸಲೇ ಬೇಕಾಗುತ್ತದೆ. ಸರ್ಕಾರದ ಈ ನೀತಿಯನ್ನು ನಾವು ಸಂಪೂರ್ಣವಾಗಿ ಪ್ರತಿಭಟಿಸುತ್ತೇನೆ.

ಅಧ್ಯಕ್ಷರು.—ನನ್ನ ಪರ್ಮಿಷನ್ ಇಲ್ಲದೆ ಯಾರಾದರೂ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ (ಐ) ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮ ವಿಷಯ ಏನು ಇದೆ ಹೇಳಿ.

ನಿಯಮ 334ರ ಮೇರೆಗೆ

(1) ವಿಷಯ.—ಶಿವಮೊಗ್ಗ ಜಿಲ್ಲೆಗೆ ಸಕ್ಕರೆ ವಿತರಣೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆ ಮೂಲಕ ಸಕ್ಕರೆ ಏನು ಬಿಡುಗಡೆ ಮಾಡಬೇಕಾಗಿತ್ತು ಅದು ಬಿಡುಗಡೆಯಾಗದೇ ಇರುವುದರಿಂದ ಅಲ್ಲಿನ ಗ್ರಾಮಾಂತರದ ಪ್ರದೇಶದ ಜನರಿಗೆ ಒಂದು ಲೋಟ ಚಹಾ ಕುಡಿಯುವುದಕ್ಕೂ ಕೂಡ ಕಷ್ಟವಾಗಿದೆ. ಗ್ರಾಮಾಂತರ ಪ್ರದೇಶದ ಜನರಿಗೆ ಇಂಥಾ ಪರಿಸ್ಥಿತಿ ಒದಗಿ ಬಂದಿದೆ. ಜುಲೈ 20ಕ್ಕೆ ಬಂದರೂ ಕೂಡ ಇನ್ನೂ ಆ ಶಿವಮೊಗ್ಗ ಜಿಲ್ಲೆಗೆ ಸಕ್ಕರೆ ವಿತರಣೆಯಾಗಿಲ್ಲ.

ಅಧ್ಯಕ್ಷರು.—ತಾವು ಈ ನೋಟೀಸ್‌ನಲ್ಲಿ ಏನು ಇದೆ ಅದನ್ನು ಮೊದಲು ಓದಿ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ನೋಟೀಸ್ ಏನು ಕೊಟ್ಟಿದ್ದೇನೆ ಅದರಲ್ಲಿರುವ ವಿಷಯವನ್ನೇ ಹೇಳುತ್ತಿದ್ದೇನೆ. ಶಿವಮೊಗ್ಗ ಜಿಲ್ಲೆಗೆ ಬೆಳಗಾಂ ಜಿಲ್ಲೆಯ ಒಂದು ಸಕ್ಕರೆ ಕಾರ್ಖಾನೆಯಿಂದ ಸಕ್ಕರೆ ಏನು ಸಪ್ಲೈ ಆಗಬೇಕಾಗಿತ್ತೋ ಇದುವರೆಗೂ ಅದು ಸಪ್ಲೈ ಆಗಿಲ್ಲ. ಈಗ ಏಜೆಂಟರಿಗೆ ಅಲ್ಲಿಂದ ಸಕ್ಕರೆ ತೆಗೆದುಕೊಂಡು ಹೋಗಿ ಬನ್ನಿ ಎಂದು ನೋಟೀಸ್ ಕೊಟ್ಟಿದ್ದಾರೆ. ಅವರು ಹೇಳಿದರೂ ಬರುತ್ತಾ ಇಲ್ಲ. ನೋಟೀಸ್ ಕೊಟ್ಟಿದ್ದಾರೆ. ಇದು ಎಂತಹ ವಿಚಿತ್ರವೋ ಗೊತ್ತಿಲ್ಲ. ಇದನ್ನು ಸರಿಮಾಡಿ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಜಿ. ಬಸವಣಪ್ಪ (ಆಹಾರ ಸಚಿವರು).—ಮಾನ್ಯ ಅಧ್ಯಕ್ಷರೆ, ಕಳೆದ ಎರಡು ತಿಂಗಳಿಂದ ಕರ್ನಾಟಕದಲ್ಲಿ ಸಕ್ಕರೆ ಬೆಲೆ ಹೆಚ್ಚಾದದ್ದು ಸರ್ಕಾರದ ಗಮನಕ್ಕೆ ಬಂದಿದೆ. ವೈಜ್ಞಾನಿಕವಾಗಿ ವಿಚಾರ ಮಾಡುವುದಾದರೆ ಸಕ್ಕರೆ ಬೆಲೆ ಹೆಚ್ಚು ಆಗಬೇಕಾದ್ದಿಲ್ಲ. ಜನತೆಯ ಅವಶ್ಯಕತೆಗೆ ಅನುಗುಣವಾಗಿ ಸಕ್ಕರೆಯನ್ನು ಸಪ್ಲೈ ಮಾಡಿದ್ದೇವೆ. ಲೆವಿ ಸಕ್ಕರೆ 16,850 ಟನ್ ಸಪ್ಲೈ ಮಾಡಿದ್ದೇವೆ. ಆಮದು ಮಾಡಿಕೊಂಡ ಸಕ್ಕರೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುವ ಸಲುವಾಗಿ 6372 ಟನ್ ಸಪ್ಲೈ ಮಾಡಿದ್ದೇವೆ. 11 ಸಾವಿರ ಮೆಟ್ರಿಕ್ ಟನ್ ಸಪ್ಲೈ ಮಾಡಿದ್ದೇವೆ. ಇದು ಜನತೆಯ ಅವಶ್ಯಕತೆಗೆ ಅನುಗುಣವಾಗಿದೆ ಆದರೂ ಕೂಡ ಕಳೆದ ಎರಡು ತಿಂಗಳಿಂದ ಸಕ್ಕರೆ ಬೆಲೆ ಜಾಸ್ತಿಯಾಗಿದೆ. ಕಾಯಿದೆ ಪ್ರಕಾರ ಪರವಾನಿಗೆ ಹೊಂದಿಲ್ಲದೇ 250 ಕ್ವಿಂಟಾಲ್ ಇಟ್ಟಿರತಕ್ಕವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಲು ಆದೇಶ ಕೊಟ್ಟಿದ್ದೇವೆ. ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಭದ್ರ ಶುಗರ್ ಫ್ಯಾಕ್ಟರಿಗೆ ಅಲಾಟ್‌ಮಾಡಿದೆವು. ಅಲ್ಲಿ ಮುಷ್ಕರ ನಡೆದ ಕಾರಣ ಲಿಫ್ಟ್‌ಮಾಡಲಿಲ್ಲ. ನಂತರ ಉಗಾರ್ ಶುಗರ್ ಫ್ಯಾಕ್ಟರಿಗೆ ಅಲಾಟ್ ಮಾಡಿದ್ದೇವೆ. ಉಗಾರ್ ಶುಗರ್ ಫ್ಯಾಕ್ಟರಿ ಬಹಳ ದೂರವಾಗುತ್ತದೆ, ಲಿಫ್ಟ್ ಮಾಡುವುದಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಕೂಡಲೇ ಅದಕ್ಕೆ ಅಲ್ಟರ್‌ನೇಟೀವ್ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಜೂನ್ ತಿಂಗಳಲ್ಲಿ ಸಕ್ಕರೆಯನ್ನು ಕೊಟ್ಟಿಲ್ಲ, ಅದನ್ನು ಈ ತಿಂಗಳಲ್ಲಿಕೊಡುತ್ತೀರಾ ?

ಅಧ್ಯಕ್ಷರು.—ಈ ರೀತಿ ಪ್ರಶ್ನೆ ಕೇಳುವುದಕ್ಕೆ ಸಾಧ್ಯವಿಲ್ಲ. ನಿಯಮದ ಪ್ರಕಾರ ಅವಕಾಶ ಕೊಡಲಿಕ್ಕೆ ಬರುವುದಿಲ್ಲ.

(ಶ್ರೀ ಯಡಿಯೂರಪ್ಪನವರು ಸಭೆಯ ಒಳಾಂಗಣವನ್ನು ಪ್ರವೇಶಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದನದಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ ಅಂದರೆ ಹೇಗೆ ? ನಾನು ಬೆಳಿಗ್ಗೆಯಿಂದ ಒಂದು ನಿಮಿಷ ಕೂಡ ಮೇಲೆ ಎದ್ದಿಲ್ಲ, ನನ್ನ ಜಿಲ್ಲೆಯ ಬಗೆ ಕಳಕಳಿ ಇಲ್ಲವೇ. ? ನಾನು ಬೆಳಿಗ್ಗೆಯಿಂದ ಒಂದು ಶಬ್ದ ಕೂಡ ಹೇಳಲು ಮೇಲೆ ಎದ್ದಿಲ್ಲ. ಈಗ ಒಂದು ಕ್ಲಾರಿಫಿಕೇಷನ್ ಕೇಳಲು ಮೇಲೆ ಎದ್ದರೆ ಅವಕಾಶ ಕೊಡುವುದಿಲ್ಲ ಅಂದರೆ ಏನು ಅರ್ಥ ? ಮಾತ ನಾಡುವುದಕ್ಕೆ ಅವಕಾಶವಿಲ್ಲವಾದರೆ ನಾವು ಇಲ್ಲಿ ಏಕೆ ಇರಬೇಕು ? ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿ ಕೊಳ್ಳಿ.

ಅಧ್ಯಕ್ಷರು.—ನಿಯಮದ ಪ್ರಕಾರ ಅವಕಾಶ ಕೊಡಲಿಕ್ಕೆ ಬರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಾಗಾದರೆ ನಾವು ಶಾಸಕರಾಗಿ ಏಕೆ ಇರಬೇಕು ? ನಿಯಮ ರೂಲ್ಸ್ ಅಂದರೆ ಬೆಳಿಗ್ಗೆಯಿಂದ ಸದನದಲ್ಲಿ ರೂಲ್ಸ್ ಪ್ರಕಾರವೇ ನಡೆಯುತ್ತಿದೆಯೇ. ?

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆಯಿಂದ ಬರಗಾಲದ ಬಗ್ಗೆ ಮಾತನಾಡಿಯಾಯಿತು. ಬೆಳಿಗ್ಗೆಯಿಂದ ಇಷ್ಟರತನಕ ವಿನಾಕಾರಣ ಒಣ ಚರ್ಚೆ ನಡೆದಿದೆ. ನಾವು ಸುಮ್ಮನೆ ಕುಳಿತುಕೊಂಡಿದ್ದೇವೆ. ಇದು ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಯಾರು ಕಾಲಿಂಗ್ ಅಟೆನ್‌ಷನ್ ಹಾಕಿದ್ದಾರೋ ಅವರಿಗೆ ಮಾತ್ರ ಅವಕಾಶ ಕೊಡಬೇಕು ಎಂದು ಇದೆ. ಆ ಪ್ರಕಾರ ನಡೆಯುತ್ತಿದೆಯೇ, ಅಂದರೆ ಇಲ್ಲ.

ಅಧ್ಯಕ್ಷರು.—ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಪ್ರಕಾರ ನಡೆಯಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ಸ್‌ಗೆ ವಿರುದ್ಧವಾಗಿ ಮಾತನಾಡಿದಂಥ ಜನ ಇಲ್ಲವೇ ಇಲ್ಲ ? ಹಾಗಾದರೆ ಸಿಕ್ಕಾಪಟ್ಟೆ ಏನು ಬೇಕಾದರೂ ಮಾತನಾಡಬಹುದು ಎಂದು ಅರ್ಥವೇ ?

ಶ್ರೀ ಆರ್. ವೆಂಕಟರಾಮಯ್ಯ.—ಇಷ್ಟೆಲ್ಲಾ ವೇಸ್ಟ್ ಆಗುತ್ತಿದೆ ಒಂದು ಸ್ಮಾಲ್ ಪಾಯಿಂಟ್‌ಗೆ ಅವಕಾಶ ಕೊಡದೇಹೋದರೆ ನಾವು ಇಲ್ಲಿ ಏಕೆ ಕುಳಿತುಕೊಳ್ಳಬೇಕು ?

(ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮ ಸ್ಥಾನವನ್ನು ಅಲಂಕರಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ವರ್ತನೆಯಿಂದ ತಮ್ಮ ಮನಸ್ಸಿಗೆ ನೋವಾಗಿದ್ದರೆ ದಯಮಾಡಿ ಕ್ಷಮಿಸಬೇಕು. ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡಬೇಕು ಎನ್ನುವ ಉದ್ದೇಶ ಸನ ಗಿಲ್ಲ. ಈರೀತಿ ಸದನ ನಡೆಯುವ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಕಳಕಳಿಯಿಂದ ಪ್ರಶ್ನೆ ಕೇಳುವು ದಕ್ಕೆ ಅವಕಾಶವಿಲ್ಲದೇ ಹೋದರೆ ಹೇಗೆ ? ನಮ್ಮ ಕಳಕಳಿಯನ್ನು ವ್ಯಕ್ತಪಡಿಸಬೇಕಾಗುತ್ತದೆ.

ಅಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ —ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ಸಕ್ಕರೆ ವಿತರಣೆಯಾಗಿಲ್ಲ. ಬಡವರು 8 ರೂಪಾಯಿಗೆ ಕೆ.ಜಿ, ಸಕ್ಕರೆ ತೆಗೆದುಕೊಂಡು ಕಾಫಿ, ಟೀ ಮಾಡಿಕೊಂಡು ಕುಡಿಯುವ ಸ್ಥಿತಿಯಲ್ಲಿಲ್ಲ ; ಅಲ್ಲಿ ಅವ್ಯವಸ್ಥೆಯಾಗದ ರೀತಿಯಲ್ಲಿ ನೋಡಬೇಕು. ಅಲ್ಲಿಗೆ ಜೂನ್, ಜುಲೈ ತಿಂಗಳಲ್ಲಿ ಸಕ್ಕರೆ ಬಂದಿಲ್ಲ. ಅವ್ಯವಸ್ಥೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಮಾನ್ಯ ಮಂತ್ರಿ ಗಳು ನಮ್ಮ ಜಿಲ್ಲೆಯವರೇ ಇದ್ದಾರೆ ಈ ವಿಷಯವನ್ನು ತಮ್ಮ ಮೂಲಕ ತರುವುದಕ್ಕೆ ಪ್ರಯತ್ನ ಮಾಡಿದೆ. ನಾನು ಕೇಳುವುದಕ್ಕೆ ಅವಕಾಶವಿಲ್ಲವೆಂದು ಹೇಳಿದರೆ, ನಾನು ಏನು ಮಾಡಲಿ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಯಡಿಯೂರಪ್ಪನವರು ಕೇಳಿದ ಪ್ರಶ್ನೆಯಲ್ಲಿ ಸತ್ಯಾಂಶವಿದೆ. ತುಂಗಭದ್ರ ಶುಗರ್ ಫ್ಯಾಕ್ಟರಿಗೆ ಅಲಾಟ್ ಮಾಡಿದೆವು. ಅಲ್ಲಿ ಮುಷ್ಕರದಿಂದ ಲಿಫ್ಟ್ ಮಾಡಲಿಲ್ಲ. ಈಗ ಬೇರೆ ವ್ಯವಸ್ಥೆ ಮಾಡಿದ್ದೇವೆ. ನಿನ್ನೆ 50 ಟನ್ ಕಳಿಸಿದ್ದೇವೆ. ಅವ್ಯವಸ್ಥೆಯಾಗದ ಹಾಗೆ ನಾವು ವ್ಯವಸ್ಥೆ ಮಾಡಿದ್ದೇವೆ.

(2) ತಗಡೂರು ರಾಮಚಂದ್ರರಾಯರ ಸಾಕ್ಷ್ಯ ಚಿತ್ರ ತೆಗೆಯುವ ಬಗ್ಗೆ

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ, ಜಮನಲಾಲ್ ಬಜಾಜ್ ಪ್ರಶಸ್ತಿ ವಿಜೇತರೂ, ರಾಜ್ಯ ಪ್ರಶಸ್ತಿ ವಿಜೇತರೂ ಹಾಗೂ ಕರ್ನಾಟಕದ ಖ್ಯಾತ ಸ್ವಾತಂತ್ರ್ಯ ಹೋರಾಟಗಾರರೂ